ಶ್ರೀ ಪಿ. ಕೆ. ಕಳ್ಳಿಗುಡ್ಡ.—ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಚಾಲೋ ಮಾಡಿದರು. ಇವರು ಬಂದಮೇಲೆ ಬಂದ್ ಮಾಡಿದರು ಮುಂದೆ ಯಾವಾಗ ಚಾಲೋ ಮಾಡುತ್ತಾರೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಹಾಗೆ ಇದು ಯಾವ ಜಿಲ್ಲೆಗೆ ಸೇರಿದೆ ತಿಳಿಸಬೇಕು.

ಶ್ರಿ ಎಂ.ಎಂ.ಜೆ. ಸದ್ಯೋಜಾತ.—ಇದು ಬಿಜಾಪುರ ಜಿಲ್ಲೆಗೆ ಸಂಬಂಧಪಟ್ಟಿರತಕ್ಕಂತಾದ್ದು. ಇದು ಒಂದು ದೊಡ್ಡ ಲಿಸ್ಟ್ ಇದೆ.

ಶ್ರೀ ಎಂ. ಎಚ್. ಬೆಕಿನಾಳ್ಕರ್.—ಸಣ್ಣ ನೀರಾವರಿ ಯೋಜನೆಯಲ್ಲಿ ಕೆರೆಗಳನ್ನು ಕಟ್ಟುವಾಗ ಇಂಜಿನಿಯರ್‌ಗಳು ೫೦೦ ಎಕರೆ ನೀರಾವರಿ ಆಗುತ್ತದೆ ಎಂದು ಹೇಳುತ್ತಾರೆ. ಆನಂತರ ನೋಡಿದರೆ ಆ ಕೆರೆಗಳಿಂದ ೫೦ ಎಕರೆ ಕೂಡ ನೀರಾವರಿ ಆಗುವುದಿಲ್ಲ. ಬೇಕಾದಷ್ಟು ದುಡ್ಡು ಖರ್ಚು ಮಾಡಿ ಸರ್ಕಾರದವರು ಸಾಕಷ್ಟು ಪ್ರಯತ್ನಪಟ್ಟು ಕಟ್ಟಿಸಿದಂಥ ಕೆರೆಗಳಲ್ಲಿ ಸರಿಯಾಗಿ ನೀರಾವರಿ ಕೆಲಸ ಆಗಲಿಲ್ಲ ಅಂದರೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ಅದರ ಬಗ್ಗೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಮಾನ್ಯ ಸದಸ್ಯರು ಇಂಥ ಕೆರೆಯಲ್ಲಿ ಸರಿಯಾಗಿ ನೀರಾವರಿ ಆಗುತ್ತಿಲ್ಲ ಎಂದು ನಿರ್ದಿಷ್ಟವಾಗಿ ತಿಳಿಸಿದರೆ ನಾವು ಪರಿಶೀಲನೆ ಮಾಡುತ್ತೇವೆ.

Percentage of Govt. Employees out of the total Population of the State.

607 SRI G.R. RAJU GOWDA (Hanur) will the Minister for Finance and Tourism be pleased to state.—

(a) the percentage of Government employees out of the total population of the State.

(b) the total amount of salary per mensem to be disbursed to them.

(c) the percentage of this amount out of the annual budget of the State?

SRI M.VEERAPPA MOILY (Minister for Finance & Tourism).—

(a) 1.04%

(b) Rs: 2462 42 lakhs.

(c) Revenue expenses 30.30%

ಶ್ರೀ ಜಿ. ರಾಜೂಗೌಡ.—ರಾಜ್ಯದಲ್ಲಿರತಕ್ಕಂಥ ಅಧಿಕಾರಿಗಳಿಗೆ ಒಂದು ತಿಂಗಳಿಗೆ ೨೪,೬೨,೪೩೦೦ ರೂಪಾಯಿ ಸಂಬಳ ಬಟವಾಡೆ ಮಾಡುತ್ತಿದ್ದೀರಿ. ಆದರಲ್ಲಿ ಐ.ಎ.ಎಸ್. ಅಧಿಕಾರಿಗಳು ಎಷ್ಟು ಜನ ಇದ್ದಾರೆ, ಅವರಿಗೆ ಹೋಗತಕ್ಕ ಸಂಬಳ ಎಷ್ಟು ತಿಳಿಸುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ನನ್ನ ಹತ್ತಿರ ಐ.ಎ.ಎಸ್. ಅಧಿಕಾರಿಗಳದ್ದು, ಬೇರೆ ಇತರೆ ಅಧಿಕಾರಿಗಳದ್ದು ವಿವರ ಇಲ್ಲ. ಮಾನ್ಯ ಸದಸ್ಯರು ಆ ಬಗ್ಗೆ ಬೇರೆ ಪ್ರಶ್ನೆ ಹಾಕಿದರೆ ನಾನು ಉತ್ತರ ಕೊಡುತ್ತೇನೆ.

ಶ್ರೀ ಜಿ. ರಾಜೂಗೌಡ.—ರಾಜ್ಯದಲ್ಲಿ ನಾನಾ ಇಲಾಖೆಗಳಲ್ಲಿ ಸುಮಾರು ೪೫ ಸಾವಿರ ಹುದ್ದೆಗಳು ಖಾಲಿ ಇವೆ. ಕೆಲವು ಹುದ್ದೆಗಳನ್ನು ಭರ್ತಿ ಮಾಡುವಾಗ ಮಿತವ್ಯಯದ ದೃಷ್ಟಿಯಿಂದ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಅದೇ ಮೇಲ್ಮಟ್ಟದಲ್ಲಿ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿದ್ದಾರೆ ಈಗ ತಮ್ಮ ಬಜೆಟ್‌ನಲ್ಲಿ ಶೇಕಡ ೩೦ರಷ್ಟು ಅಧಿಕಾರಿಗಳಿಗೆ ಹೋಗುತ್ತದೆಂದು ಹೇಳುತ್ತೀರಿ. ಇದರಲ್ಲಿ ಹಿರಿಯ ಅಧಿಕಾರಿಗಳಿಗೆ ಎಷ್ಟು ಹೋಗುತ್ತದೆ ?

ಶ್ರೀ ಎಂ. ವೀರಪ್ಪಮೊಯಿಲಿ.—ತಮಗೆ ಅದರ ಬಗ್ಗೆ ಉತ್ತರ ಹೇಳಬೇಕು ಎಂದರೆ ಬಜೆಟ್ ಮೇಲೆ ಉತ್ತರ ಕೊಡುವಾಗ ಉತ್ತರ ಹೇಳುತ್ತೇನೆ.

ಶ್ರೀ ಜಿ. ರಾಜೂಗೌಡ.—ಕೇಂದ್ರಸರ್ಕಾರದಲ್ಲಿ ಕೊಡತಕ್ಕಂಥ ಸಂಬಳಕ್ಕಿಂಥ ನಮ್ಮ ರಾಜ್ಯ ಸರ್ಕಾರದಲ್ಲಿ ಯಾವ ಹುದ್ದೆಗೆ ಹೆಚ್ಚಿಗೆ ಸಂಬಳ ಕೊಡುತ್ತೀರಾ ತಿಳಿಸಬೇಕು.

ಶ್ರೀ ಎಂ. ವೀರಪ್ಪಮೊಯ್ಲಿ.—ಇದಕ್ಕೂ ಕೂಡ ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಒದಗಿಸುತ್ತೇನೆ.

ಶ್ರೀ ಡಿ. ಟಿ ರಾಮು.—ನಮ್ಮ ರಾಜ್ಯದಲ್ಲಿ ೪೫ ಸಾವಿರ ಹುದ್ದೆಗಳು ಖಿನೇ ದರ್ಜೆಯವು ಖಾಲಿ ಇವೆಯೆಂದು ತಿಳಿದುಬಂದಿದೆ. ಈ ಹುದ್ದೆಗಳನ್ನೆಲ್ಲಾ ಆದಷ್ಟು ಜಾಗ್ರತೆ ಭರ್ತಿಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪಮೊಯ್ಲಿ.—ಇದು ಡಿ.ಪಿ.ಎ.ಆರ್.ಗೆ ಸಂಬಂಧಪಟ್ಟ ವಿಷಯ. ಈ ಖಾತೆ ಮಾನ್ಯ ಮುಖ್ಯ ಮಂತ್ರಿಯವರಿಗೆ ಬರುವುದರಿಂದ, ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಮಾನ್ಯ ಮುಖ್ಯ ಮಂತ್ರಿಯವರಿಗೇ ಕೇಳಬೇಕು.

ಶ್ರೀ ಎಂ. ಸಿ. ಬಸಪ್ಪ.—ಶೇಕಡ ೧೦೪ ಜನರಿಗೆ ೩೦-೩೦ ಪರ್ಸೆಂಟ್ ಹಣವನ್ನು ಖರ್ಚುಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ಹಾಗಾದರೆ ಈ ನೌಕರರು ತೃಪ್ತರಾಗಿದ್ದಾರೆಯೋ? ಅಥವಾ ಅತೃಪ್ತರಾಗಿದ್ದಾರೆಯೋ?

ಶ್ರೀ ಎಂ. ವೀರಪ್ಪಮೊಯ್ಲಿ.—ಯಾವುದೇ ಕಾರಣದಿಂದಲೂ ನಮ್ಮ ರಾಜ್ಯ ಸರ್ಕಾರೀ ನೌಕರರು ಅತೃಪ್ತರಾಗುವುದಕ್ಕೆ ಅವಕಾಶವೇ ಇಲ್ಲ.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ೩೦-೩೦ ಪರ್ಸೆಂಟ್ ಹಣವನ್ನು ತಾವು ಖರ್ಚು ಮಾಡಿದಮೇಲೆ ಆ ಹಣಕ್ಕೆ ತಕ್ಕಂತೆ ನೌಕರರು ಪ್ರಾಮಾಣಿಕವಾಗಿ ಕೆಲಸಮಾಡುತ್ತಿದ್ದಾರೆಯೆ? ಅವರು ಮಾಡುತ್ತಾರೆಯೇ? ಇಲ್ಲವೇ? ಎಂಬುದನ್ನು ಅಳತೆಮಾಡಿ ನೋಡುವುದಕ್ಕೆ ತಮ್ಮಲ್ಲಿ ಏನಾದರೂ ಅಳತೆ ಗೋಲು ಇದೆಯೇ ?

ಶ್ರೀ ಎಂ. ವೀರಪ್ಪಮೊಯ್ಲಿ.—ಸರ್ಕಾರೀ ನೌಕರರು ತೃಪ್ತಿಕರವಾಗಿದ್ದುಕೊಂಡು ಅದಕ್ಕೆ ಕೆಲಸ ಮಾಡಲಿ ಎಂಬ ಉದ್ದೇಶದಿಂದಲೇ ಆಗಿಂದಾಗ್ಗೆ ಅವರಿಂದ ಬರುವ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತಿರುತ್ತೇವೆ. ಅವರೂ ಕೂಡ ಒಳ್ಳೆಯ ದಕ್ಷತೆಯಿಂದಲೇ ಕೆಲಸ ಮಾಡುತ್ತಿದ್ದಾರೆಂದು ಅಂದುಕೊಂಡಿದ್ದೇನೆ.

ಶ್ರೀ ಜಿ. ರಾಜೂಗೌಡ.—ಸ್ವಾಮಿ ಶೇಕಡ ೩೦ರಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆಂದು ಹೇಳುತ್ತೀರಿ. ಆ ಬೇರೆ ರಾಜ್ಯಗಳಿಗೆ ಹೋಲಿಸಿದರೆ ತಾವು ಕೊಡುತ್ತಿರುವುದು ಜಾಸ್ತಿ ಎಂದು ಕಂಡು ಬಂದಿಲ್ಲವೆ ? ತೆಗೆದುಕೊಳ್ಳತಕ್ಕ ಸಂಬಳಕ್ಕೆ ಸರಿಯಾಗಿ ಕೆಲಸ ಮಾಡುತ್ತಿದ್ದಾರೆಯೇ ? ಇಲ್ಲವೇ ? ಎಂಬುದನ್ನು ತಾವು ನೋಡುತ್ತಿದ್ದೀರಾ ?

ಶ್ರೀ ಎಂ. ವೀರಪ್ಪಮೊಯ್ಲಿ.—ಬೇರೆ ಎಲ್ಲ ರಾಜ್ಯಗಳಲ್ಲೂ ಎಷ್ಟೆಷ್ಟು ಕೊಡುತ್ತಿದ್ದಾರೆ ಎನ್ನುವ ಬಗ್ಗೆ ನನ್ನಲ್ಲಿ ಸಂಪೂರ್ಣ ಮಾಹಿತಿ ಇಲ್ಲದಿದ್ದರೂ ಮೂರು ರಾಜ್ಯಗಳವರು ಎಷ್ಟಷ್ಟು ಕೊಡುತ್ತಿದಾರೆಂಬ ಮಾಹಿತಿ ನನ್ನ ಹತ್ತಿರ ಇದೆ. ಅದರಲ್ಲಿ ತಮಿಳ್ನಾಡು ಸರ್ಕಾರದವರು ೨೯.೪೬ ಪರ್ಸೆಂಟ್, ಆಂಧ್ರ ಪ್ರದೇಶದವರು ೨೧-೨೧ ಪರ್ಸೆಂಟ್ ಹಾಗೂ ಕೇರಳದಲ್ಲಿ ೩೨.೦೫ ಪರ್ಸೆಂಟ್ ಹಣವನ್ನು ತಮ್ಮ ನೌಕರಿಗಾಗಿ ಖರ್ಚುಮಾಡುತ್ತಿದಾರೆ. ಹಲವಾರು ಕಾರಣದಿಂದಾಗಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಒಂದು ದಾಮಾಷಾ ಬಂದಿದೆ. ಆದನ್ನು ಅನುಸರಿಯೇ ನಾವು ಕೊಡಬೇಕಾಗುತ್ತದೆ. ಆದರೆ ಒಮ್ಮೆಲೇ ನಾವು ಆದನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ ನಮ್ಮ ರಾಜ್ಯದಲ್ಲಿ ಹೆಚ್ಚಿಗೆ ಕೊಡುತ್ತಿದ್ದೇವೆಂದು ಹೇಳವುದು ಸರಿಯಲ್ಲ ಸಾಮಾನ್ಯವಾಗಿ ಪ್ರತಿಯೊಂದು ರಾಜ್ಯವೂ ಕೂಡ ತನ್ನ ನೌಕರರಿಗೆ ಎಷ್ಟುಹಣವನ್ನು ಕೊಡುವುದಕ್ಕೆ ಸಾಧ್ಯ ಎಂಬುದನ್ನು ನೋಡಿಕೊಂಡು ಅದಕ್ಕೆ ತಕ್ಕಂತೆಯೇ ಕೊಡುತ್ತದೆ.

ಶ್ರೀ ಹೆಚ್. ಗಂಗಾಧರನ್.—ಸ್ವಾಮಿ, ಈ ನೌಕರರ ಟಿ.ಎ. ಡಿ.ಎ. ಮುಂತಾದ್ದು ಒಂದು ವರ್ಷಕ್ಕೆ ಎಷ್ಟು ಖರ್ಚಾಗುತ್ತದೆಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ವೀರಪ ಮೊಯ್ಲಿ.—ಇದಕ್ಕೆ ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಒದಗಿಸುತ್ತೇನೆ.

Opening of Primary Schools in the Villages.

730. SRI BHAVU RAO DESHPANDE (Dharwad).—Will the Minister of State for Primary and Secondary Education be pleased to state.—

(*a*) the number of villages in Karnataka State where there are no primary schools;

(*b*) the scheme proposed by the Government to open primary schools in those villages?

SMT. NAGAMMA C. KESHAVAMURTHY.—(Minister of State for Primary and Secondary Education)

(*a*) The number of villages having more than 300 population without schools—649.

(*b*) Schools have been sanctioned to all these 649 villages in the year 1981-82. Amount has been sanctioned for providing at least one room and one teacher.

ಶ್ರೀ ಬಾಪೂರಾವ್ ದೇಶಪಾಂಡೆ.—ನನ್ನ (ಆ) ಪ್ರಶ್ನೆಗೆ ಉತ್ತರವಾಗಿ ೧೯೮೧-೮೨ನೇ ಸಾಲಿನಲ್ಲಿ ಈ ಎಲ್ಲಾ ೬೪೯ ಹಳ್ಳಿಗಳಿಗೂ ಶಾಲೆಗಳು ಮಂಜೂರಾಗಿವೆ, ಕನಿಷ್ಠ ಒಂದು ಶಾಲಾ ಕೋಣೆ ಮತ್ತು ಒಬ್ಬ ಶಿಕ್ಷಕರ ನೇಮಕಾತಿಗೆ ಒಟ್ಟಿಗೆ ನೀಡಿ ಹಣ ಒದಗಿಸಲಾಗಿದೆ ಎಂದು ಹೇಳಿದ್ದೀರಿ. ಇದುವರೆಗೆ ಎಷ್ಟು ಕಡೆಗಳಲ್ಲಿ ಶಾಲಾ ಕಟ್ಟಡಗಳನ್ನೂ ಮತ್ತು ಉಪಾಧ್ಯಾಯರನ್ನೂ ಒದಗಿಸಿಕೊಟ್ಟಿದ್ದೀರೆಂಬುದನ್ನು ತಿಳಿಸುತ್ತೀರಾ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಕಡ್ಡಾಯ ಶಿಕ್ಷಣ ನಿಯಮಾವಳಿಯ ಪ್ರಕಾರ ೩೦೦ ಜನ ಇರತಕ್ಕ ಊರುಗಳಿಗೆ ಒಂದೊಂದು ಶಾಲೆಯಂತೆ ಮಂಜೂರು ಮಾಡಿದ್ದೇವೆ. ಆದರ ಪ್ರಕಾರ ಪ್ರಸಕ್ತ ಸಾಲಿನಲ್ಲಿ ೬೪೯ ಶಾಲೆಗಳನ್ನೂ ಮತ್ತು ೬೪೯ ಉಪಾಧ್ಯಾಯರ ಹುದ್ದೆಗಳನ್ನೂ ಮಂಜೂರು ಮಾಡಲಾಗಿದೆ. ಮುಂದಿನ ವರ್ಷದಲ್ಲಿ ಅಂದರೆ ೧೯೮೨-೮೩ನೇ ಸಾಲಿನಲ್ಲಿ ಈ ಶಾಲೆಗಳಿಗೆ ಆವ್ಯತೆ ಕೊಟ್ಟು ಕೊಠಡಿಗಳನ್ನು ಕಟ್ಟಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಮಳ್ಳೂರು ಆನಂದರಾವ್.—೧೯೮೧-೮೨ನೇ ಸಾಲಿನಲ್ಲಿ ಮಂಜೂರಾತಿ ಮಾಡಿದ್ದೇವೆಂದು ಹೇಳಿದ್ದೀರಿ. ಇದರ ಪೈಕಿ ಎಷ್ಟು ಶಾಲೆಗಳು ಪ್ರಾರಂಭವಾಗಿವೆ? ಮತ್ತು ಇನ್ನೂ ಎಷ್ಟು ಪ್ರಾರಂಭ ಆಗಬೇಕಾಗಿವೆ, ಎಂಬುದನ್ನು ತಿಳಿಸುತ್ತೀರಾ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈ ಬೆಳ್ಳಿ ಹಬ್ಬದ ವರ್ಷದಲ್ಲಿ ರಾಜ್ಯದ ಪ್ರತಿಯೊಂದು ಹಳ್ಳಿಗೂ ಶಾಲೆಗಳನ್ನು ಕೊಡಬೇಕೆಂದು ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಆದರ ಪ್ರಕಾರ ಮುಂದಿನ ನವೆಂಬರ್ ೧ನೇ ತಾರೀಖಿನೊಳಗಾಗಿ ಮಂಜೂರಾದ ಎಲ್ಲ ೬೪೯ ಹಳ್ಳಿಗಳಲ್ಲೂ ಪ್ರಾಥಮಿಕ ಶಾಲೆಗಳನ್ನು ತೆರೆಯಬೇಕೆಂದಿದ್ದೇವೆ. ನವೆಂಬರ್‌ಗಿಂತ ಮುಂಚಿತವಾಗಿ ಬರುವ ಮೇ ತಿಂಗಳ ೨೨ನೇ ತಾರೀಖಿನಿಂದಿಲೇ ಈ ೬೪೯ ಶಾಲೆಗಳನ್ನೂ ಪ್ರಾರಂಭಿಸುತ್ತೇವೆ.

ಶ್ರೀ ಮಳ್ಳೂರು ಆನಂದರಾವ್.—೧೯೮೧-೮೨ನೇ ಸಾಲಿನಲ್ಲಿ ೬೪೯ ಹಳ್ಳಿಗಳಿಗೆ ಶಾಲೆಗಳನ್ನು ಮಂಜೂರು ಮಾಡಿದ್ದೇವೆಂದು ಹೇಳಿದಿರಿ. ಈಗ ಈ ವರ್ಷ ಮುಗಿಯುತ್ತಾ ಬಂದಿದೆ. ಆದ್ದರಿಂದ ಈಗ ಎಷ್ಟು ಶಾಲೆಗಳು ಪ್ರಾರಂಭವಾಗಿವೆ ಮತ್ತು ಎಷ್ಟು ಶಾಲೆಗಳು ಪ್ರಾರಂಭವಾಗಬೇಕಾಗಿವೆ ಎಂಬುದನ್ನು ತಿಳಿಸುತ್ತೀರಾ?